ರೈತರಿಂದ ಸುಮಾರು ೨,೦೦೦ ಎಕರೆ ಗಜನಿ ಭೂಮಿಯನ್ನು ವಶಪಡಿಸಿಕೊಂಡು ಉತ್ತರ ಕನ್ನಡ ಜಿಲ್ಲೆಯ ಬೆಣಗಾದಲ್ಲಿ ಸ್ಥಾಪಿತವಾದ ಕಾಸ್ಟಿಕ್ ಸೋಡಾ ಫ್ಯಾಕ್ಟರಿಗೆ ಅಗತ್ಯವಿರುವ ಉಪ್ಪನ್ನು ತಯಾರಿಸಿಕೊಳ್ಳುವ ಕರಾರಿನ ಮೇಲೆ ಕೊಡಿಸಲಾಗಿತ್ತು. ಆದರೆ ಬೆಣಗಾದಲ್ಲಿ ಕ್ಯಾಸ್ಟಿಕ್ ಸೋಡಾ ಫ್ಯಾಕ್ಟರಿಗೆ ಉಪಯೋಗವಾಗುವ ಗುಣ ಮಟ್ಟದ ಉಪ್ಪನ್ನು ತಯಾರಿಸಲು ಸಾಧ್ಯವಾಗದೆ ಸದರಿ ಗಜನಿ ಭೂಮಿಯ ಕೆಲವೊಂದು ಕ್ಷೇತ್ರದಲ್ಲಿ ಮಾತ್ರ ತಿನ್ನುವ ಉಪ್ಪನ್ನು ತಯಾರಿಸಿ ಅದನ್ನು ಮಾರಾಟ ಮಾಡಲಾಗುತ್ತಿದೆ. ಇದು ಮೈಸೂರು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡ್ ಮತ್ತು ಬಿಣಗಾ ಕಾಸ್ಟಿಕ್ ಸೋಡಾ ಫ್ಯಾಕ್ಟರಿ ಇವರ ನಡುವೆ ನಡೆದ ಕರಾರಿನ ಸ್ಪಷ್ಟ ಉಲ್ಲಂಘನೆಯಾಗಿದೆ. ತಮ್ಮಿಂದ ವಶಪಡಿಸಿಕೊಂಡ ಭೂಮಿಯನ್ನು ನಿಶ್ಚಿತ ಉದ್ದೇಶಕ್ಕೆ ಬಳಸಿಕೊಳ್ಳದೆ ಬಹುಪಾಲು ಭೂಮಿಯನ್ನು ವ್ಯರ್ಥವಾಗಿ ಹಾಳುಗೆಡವಿರುವುದನ್ನು ನಿತ್ಯವೂ ನೋಡುತ್ತಿರುವ ರೈತರ ಹೊಟ್ಟೆ ಉರಿಯುವಂತಾಗಿದೆ. ಆದ್ದರಿಂದ ಆಲ್ಲಿಯ ರೈತರಿಂದ ವಶಪಡಿಸಿಕೊಂಡ ಭೂಮಿ ವ್ಯರ್ಥವಾಗಿ ಹಾಳಾಗದಂತೆ ಏನಾದರೊಂದು ವ್ಯವಸ್ಥೆ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ, ಲಕ್ಷ್ಮೀಸಾಗರ್ (ಕೈಗಾರಿಕಾ ಸಚಿವರ ಪರವಾಗಿ).—ಅಧ್ಯಕ್ಷರೆ, ಸಂಬಂಧಪಟ್ಟ ಸಚಿವರು ಸದನದಲ್ಲಿ ಇಲ್ಲ. ಮಾನ್ಯ ಸದಸ್ಯರಿಗೆ ವರದಿ ತರಿಸಿ ಉತ್ತರ ಕೊಡುವ ವ್ಯವಸ್ಥೆಯನ್ನು ಮಾಡುತ್ತೇನೆ.

(7) ಹುಬ್ಬಳ್ಳಿ–ಧಾರವಾಡದಲ್ಲಿ ಕಾಲರಾ–ಕರುಳುಬೇನೆ ಕಾಯಿಲೆ ಹರಡಿರುವ ಬಗ್ಗೆ

ಹಿಂಡಸಗೇರಿ ಎ.ಮ್,.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಕರುಳುಬೇನೆ ಹಾಗೂ ಕಾಲರಾ ರೋಗದ ಹಲವಾರು ಪ್ರಕರಣಗಳು ವರದಿಯಾಗಿದ್ದು, ಈ ಬೇನೆಯಿಂದ ಒಬ್ಬರ ಸಾವು ಸಹ ಉಂಟಾಗಿದೆ. ಈವರೆಗೆ ಇದರ ಬಗ್ಗೆ ಸರ್ಕಾರದವರು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಆದ ಕಾರಣ ಈ ವಿಷಯದ ಬಗ್ಗೆ ಸಭೆಯ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಕಾಲರ ರೋಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಸೂಕ್ತಮಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ತತ್‌ಕ್ಷಣ ನಿರ್ದೇಶನವನ್ನು ಇವತ್ತೇ ಕಳುಹಿಸುತ್ತೇನೆ. ಸಾಮಾನ್ಯವಾಗಿ ಬೇಸಿಗೆಯ ಸಮಯದಲ್ಲಿ ಈ ರೋಗ ಕಾಣಿಸುತ್ತಾ ಇದೆ. ಇದನ್ನು ತಡೆಗಟ್ಟುವುದಕ್ಕೆ ಸೂಕ್ತವಾದ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಹುಬ್ಬಳ್ಳಿ–ಧಾರವಾಡ ಮಹಾ ನಗರಪಾಲಿಕೆಯವರಿಗೆ ಆದೇಶ ಕೊಡುತ್ತೇನೆ.

೮ ಗುಲ್ಬರ್ಗ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಮುಷ್ಕರ

ಶ್ರೀ ಬಿ. ಸ್ವಾಮಿರಾವ್.—ಗುಲ್ಬರ್ಗಾ ಯೂನಿವರ್ಸಿಟಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಒಂದನೇ ಮತ್ತು ಎರಡನೆ ವರ್ಷದ ವಿದ್ಯಾರ್ಥಿಗಳು ೧೩ ವಿಷಯಗಳಲ್ಲಿ ಉತ್ತೀರ್ಣರಾದರೆ ಮುಂದಿನ ವರ್ಷಕ್ಕೆ ಪ್ರವೇಶಿಸಲು ಅರ್ಹರೆಂದು ಘೋಷಿಸಬೇಕೆಂದು ಕೇಳಿಕೊಂಡು ಅನಿರ್ದಿಷ್ಟ ಕಾಲ ಉಪವಾಸದಲ್ಲಿದ್ದು ಇದೀಗ ೧೯ ದಿನಗಳಾದರೂ ಅವರ ಕೇಳಿಕೆ ಈಡೇರಿಸಲಾಗಿರುವುದಿಲ್ಲ. ಉಪವಾಸದಲ್ಲಿರುವ ಕೆಲವು ವಿದ್ಯಾರ್ಥಿಗಳ ಸ್ಥಿತಿಯು ಚಿಂತಾಜನಕವಾಗಿದ್ದು ಪರಿಸ್ಥಿತಿಯು ಗಂಭೀರವಾಗಿದೆ. ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲಿಚ್ಛಿಸುತ್ತೇನೆ.

ಶ್ರೀ ಎಂ. ರಘುಪತಿ.—ಇಂಜಿನಿಯರಿಂಗ್ ತರಗತಿಯ ಬಗ್ಗೆ ಮಾನ್ಯ ಬಿ. ಸ್ವಾಮಿರಾವ್‌ರವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಈ ಎರಡು ಕೋರ್ಸ್‌ಗಳ ಬಗ್ಗೆ ನಾವು ಯಾವಾಗಲೂ ಬಹಳ ಎಚ್ಚರಿಕೆಯಿಂದ ವಿಚಾರ ಮಾಡಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕೋರ್ಸ್ ಈ ಎರಡು ಬಹಳ ಪ್ರಮುಖವಾದುದು. ಇದು ಜನಜೀವನಕ್ಕೆ ಸಂಬಂಧಪಟ್ಟದ್ದು. ಈಗಾಗಲೇ ಈ ಕೋರ್ಸ್‌ನಲ್ಲಿ ಗುಣಮಟ್ಟ ಕಡಿಮೆಯಾಗಿದೆಯೆಂದು ಹೇಳುತ್ತಾರೆ. ಧರ್ಮಸಿಂಗ್‌ರವರೇ ಪೂರ್ತಿಯಾಗಿ ಕೇಳಿ, ಇದರ ಬಗ್ಗೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಇದರ ಗುಣಮಟ್ಟ ಕಡಿಮೆಯಾಗಬಾರದೆಂಬ ಎನ್ನುವುದೇ ನನ್ನ ಉದ್ದೇಶ. ಪ್ರತಿಯೊಂದಕ್ಕೂ ಆರ್ಡಿನೆನ್ಸ್ ಕೊಟ್ಟು ಕೊಂಡು ಹೋದರೆ ಇಂಜನಿಯರಿಂಗ್ ಮತ್ತು ಮೆಡಿಕಲ್‌ನ ಗುಣಮಟ್ಟ ಕಾಪಾಡುವುದಕ್ಕೆ ಆಗುವುದಿಲ್ಲ. ಆದಕಾರಣ ಇದಕ್ಕಾಗಿ ಯಾವ ರಿಯಾಯಿತಿಯನ್ನು ಕೊಡುವುದಕ್ಕಾಗುವುದಿಲ್ಲ. ವಿಶ್ವವಿದ್ಯಾನಿಲಯದವರು ಏನು ನಿರ್ಣಯ ತೆಗೆದುಕೊಳ್ಳುತ್ತಾರೋ ಆ ನಿರ್ಣಯದಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.